**ದಿನಾಂಕಃ 01.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ–**

18. ನಾನು ಪ್ರಕರಣದ ಕಡತಗಳನ್ನು ಪಡೆದುಕೊಂಡು ತನಿಖೆ ಕೈಗೊಂಡಾಗ, ಮೃತದೇಹ ಟಿ. ನರಸೀಪುರ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿತ್ತು. ನಾನು ಪ್ರಕರಣದ ಕಡತಗಳನ್ನು ಪಡೆದುಕೊಂಡು ತನಿಖೆ ಪ್ರಾರಂಭಿಸಿದಾಗ ರಾತ್ರಿ 10.45 ಗಂಟೆ ಆಗಿರುತ್ತದೆ.

19. ಆರೋಪಿಯ ಪತ್ತೆಗೆ ಸಿಬ್ಬಂದಿಗಳನ್ನು ನೇಮಿಸಿರುತ್ತೇನೆಂದು ಹೇಳಿದ್ದು, ಅವರಿಗೆ ಆರೋಪಿಯ ಚಹರೆ, ಗುರುತು ಅವುಗಳ ಬಗ್ಗೆ ಪೋಟೋ ನೀಡಿರುತ್ತೀರಿಯೇ? ಎಂದರೆ ಸಾಕ್ಷಿಯು ಇಲ್ಲಎಂದು ನುಡಿಯುತ್ತಾರೆ. ಆರೋಪಿಯ ಪತ್ತೆಗಾಗಿ ಚಾ.ಸಾಃ24 ಮತ್ತು 25 ರವರನ್ನು ರಾತ್ರಿ 10.45 ಕ್ಕೆ ನೇಮಕ ಮಾಡಿರುತ್ತೇನೆ. ಆರೋಪಿಯನ್ನು ದಿಃ- 30.07.2021 ರಂದು ಚಾ.ಸಾಃ24 ಮತ್ತು25 ರವರು ಟಿ. ನರಸೀಪುರ ಬಸ್ ನಿಲ್ದಾಣದ ಬಳಿ ಬೆಳಿಗ್ಗೆ 6.15 ಕ್ಕೆ ವಶಕ್ಕೆ ಪಡೆದು ನನ್ನ ಮುಂದೆ 6.30 ಕ್ಕೆ ನಿಶಾನೆ ಪಿ-30 ರ ಪ್ರಕಾರ ಹಾಜರುಪಡಿಸಿರುವುದಿಲ್ಲ, ಆತ ಆಸ್ಪತ್ರೆಯಲ್ಲಿಯೇ ತನ್ನ ತಾಯಿಯ ಬಳಿ ಇದ್ದನು ಎಂದರೆ ಸರಿಯಲ್ಲ.

20. ಆರೋಪಿಯ ಸ್ವಇಚ್ಚಾ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ, ಸದರಿ ಹೇಳಿಕೆಯನ್ನು ಪ್ರಕರಣಕೋಸ್ಕರ ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ.

21. ಶವಾಗಾರದಲ್ಲಿ ಶವತನಿಖಾ ಮಹಜರ್ ಕಾಲದಲ್ಲಿ ಚಾ.ಸಾಃ9 ಮತ್ತು 10 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾ.ಸಾಃ10 ರವರು ನನ್ನ ಮುಂದೆ ಯಾವುದೇ ರೀತಿಯ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

22. ನಿಶಾನೆ ಪಿ-11 ರಿಂದ 13 ಪೋಟೋಗಳನ್ನು ಯಾವಾಗ ತೆಗೆಯಲಾಗಿರುತ್ತದೆ? ಎಂದರೆ ಸಾಕ್ಷಿಯು ಶವ ತನಿಖಾ ಕಾಲದಲ್ಲಿ ಶವಾಗಾರದಲ್ಲಿ ಬೆಳಿಗ್ಗೆ 7.30 ರಿಂದ 10 ಗಂಟೆಯವರೆಗೆ ತೆಗೆಯಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿಶಾನೆ ಪಿ-11 ರಿಂದ 13 ರಲ್ಲಿ ಮಹಜರನ್ನು ಯಾರು ಬರೆಯುತ್ತಿದ್ದಾರೆ? ಎಂಬುದು ಕಂಡು ಬರುವುದಿಲ್ಲ ಎಂದರೆ ಸಾಕ್ಷಿಯು ಹೆಚ್.ಸಿ ಪ್ರಭಾಕರ್ ಎನ್ನುವವರು ಬರೆಯುತ್ತಿದ್ದು, ಬಲಭಾಗದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಿಶಾನೆ ಪಿ-11 ರಿಂದ 13 ಪೋಟೋಗಳನ್ನು ಪ್ರಕರಣದಲ್ಲಿ ಕಲಂ 302 ಆರೋಪವನ್ನು ತೋರಿಸಲು ತೆಗೆಯಲಾಗಿರುತ್ತದೆ ಎಂದರೆ ಸರಿಯಲ್ಲ.

23. ಪ್ರಕ್ರಿಯೆಯನ್ನು ಚಾ.ಸಾಃ1 ರವರಿಗೆ ಎಷ್ಟು ಗಂಟೆಗೆ ಮೃತದೇಹವನ್ನು ನೀಡಲಾಗಿರುತ್ತದೆ? ಎಂದರೆ ಸಾಕ್ಷಿಯು ಡಬ್ಲ್ಯೂಪಿಸಿ ಯವರಿಗೆ ಮೃತದೇಹದ ಬೆಂಗಾವಲಿಗೆ ನೇಮಿಸಲಾಗಿದ್ದು, ಮರಣೋತ್ತರ ಪರೀಕ್ಷೆ ನಂತರ ಮೃತದೇಹವನ್ನು ನೀಡಲಾಗಿರುತ್ತದೆ, ಎಷ್ಟು ಗಂಟೆಗೆ ಎಂದು ಖಚಿತವಾಗಿ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ.

24. ಠಾಣೆಯಲ್ಲಿ ಆರೋಪಿಯಿಂದ ಆರೋಪಿ ಕೃತ್ಯ ನಡೆದ ಸಮಯದಲ್ಲಿ ಧರಿಸಿದ ಬಟ್ಟೆಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ ಮತ್ತು ಆ ಕಾಲದಲ್ಲಿ ಪೋಟೋ ತೆಗೆದಿರುತ್ತೇನೆ ಎಂದು ಹೇಳಿದ್ದು, ಸದರಿ ನಿಶಾನೆ ಪಿ–17 ರಿಂದ 21 ರ ಪೋಟೋಗಳಲ್ಲಿ ಮಹಜರನ್ನು ಯಾರು ಬರೆಯುತ್ತಿದ್ದಾರೆ ಎಂಬುದು ಕಾಣುತ್ತಿಲ್ಲ, ಕೇವಲ ವ್ಯಕ್ತಿಗಳನ್ನು ನಿಲ್ಲಿಸಿ ಪೋಟೋಗಳನ್ನು ತೆಗೆದಿರುವಂತೆ ಕಾಣುತ್ತದೆ ಎಂದರೆ ಸಾಕ್ಷಿಯು ಹೆಚ್.ಸಿ 142 ಪ್ರಭಾಕರ್ ರವರು ನಾನು ಹೇಳಿದಂತೆ ಮಹಜರ್ ಕ್ರಮ ಜರುಗಿಸಿ, ಪೋಟೋವನ್ನು ತೆಗೆಸಿದ್ದು, ಆ ಬಗ್ಗೆ ಮಹಜರ್ ನಲ್ಲಿ ಕೂಡ ನಮೂದಿಸಲಾಗಿರುತ್ತದೆ ಮತ್ತು ಪೋಟೋದಲ್ಲಿಯೂ ಕೂಡ ಗುರುತಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿಶಾನೆ ಪಿ–17 ರಿಂದ 21 ರ ಪೋಟೋಗಳನ್ನು ಪ್ರಕರಣಕೋಸ್ಕರ ತೆಗೆಯಲಾಗಿದ್ದು, ಅಲ್ಲಿ ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಮತ್ತು ಮುದ್ದೆಮಾಲುಃ– 6 ಮತ್ತು 7 ನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

25. ಮತ್ತೆ ಮರಳಿ ಕೃತ್ಯ ನಡೆದ ಸ್ಥಳಕ್ಕೆ ಎಷ್ಟು ಗಂಟೆಗೆ ಹೋಗಿರುತ್ತೀರಿ? ಎಂದರೆ ಸಾಕ್ಷಿಯು 12.05 ಗಂಟೆಗೆ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಸ್ಥಳಕ್ಕೆ ಹೋದಾಗ ಮೃತದೇಹ ಅಲ್ಲಿ ಇರಲಿಲ್ಲ. ನಾನು ಸ್ಥಳಕ್ಕೆ ಹೋದಾಗ ಮೃತದೇಹ ಮನೆಯಲ್ಲಿಯೇ ಇದ್ದು, ಸ್ಥಳದಲ್ಲಿ ಸಂಬಂಧಿಕರು ಮತ್ತು ಸ್ಥಳೀಯರು ಇದ್ದರು ಎಂದರೆ ಸರಿಯಲ್ಲ.

26. ನಿಶಾನೆ ಪಿ–3 ರಿಂದ 6 ಪೋಟೋಗಳನ್ನು ಯಾವಾಗ ತೆಗೆಯಲಾಗಿರುತ್ತದೆ ಎಂದರೆ ಸಾಕ್ಷಿಯು ಮಹಜರ್ ಕಾಲದಲ್ಲಿ 12.15 ರಿಂದ 1.20 ರ ನಡುವೆ ತೆಗೆಯಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿಶಾನೆ ಪಿ–3 ರಿಂದ 6 ಪೋಟೋದಲ್ಲಿರುವ ಮನೆ ಯಾರದ್ದಾಗಿರುತ್ತದೆ ಎಂದರೆ ಸಾಕ್ಷಿಯು ಪಿರ್ಯಾದುದಾರದ್ದಾಗಿರುತ್ತದೆ ಎಂದು ನುಡಿಯುತ್ತಾರೆ. ಪೋಟೋದಲ್ಲಿ ಪಿರ್ಯಾದುದಾರರು ಮತ್ತು ಪಂಚರನ್ನು ಬಿಟ್ಟು ಬೇರೆ ಯಾರು ಸ್ಥಳೀಕರು ಕಾಣುತ್ತಿಲ್ಲ ಎಂದರೆ ಸರಿ. ನಿಶಾನೆ ಪಿ–3 ರಿಂದ 6 ಪೋಟೋದಲ್ಲಿ ಸೌದೆಗಳನ್ನು ಹಾಕಿರುವ ಗುಡ್ಡೆ ಕಾಣುತ್ತದೆ ಎಂದರೆ ಸರಿ. ನಿಶಾನೆ ಪಿ–3 ಪೋಟೋದಲ್ಲಿ ಪಿರ್ಯಾದುದಾರರು ಸದರಿ ಸೌದೆಗಳ ಗುಡ್ಡೆಯಿಂದ ಸೌದೆಯನ್ನು ತೆಗೆಯುತ್ತಿರುವಂತೆ ಕಾಣುತ್ತದೆ ಎಂದರೆ ಸರಿಯಲ್ಲ. ಸದರಿ ದೊಣ್ಣೆ ಇದೆ ಎಂದು ತೋರಿಸಿದ್ದು, ಪಿಯಾದುದಾರರು ಯಾವುದಾದರೂ ವಿಶೇಷ ಗುರುತನ್ನು ಇಟ್ಟುಕೊಂಡಿದ್ದರೆ? ಎಂದರೆ ಸಾಕ್ಷಿಯು ದೊಣ್ಣೆ ಮುಂದುಗಡೆ V ಆಕಾರದಲ್ಲಿದ್ದು ಎಂದು ಹಾಜರುಪಡಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಶಾನೆ ಪಿ–3 ರಲ್ಲಿ V ಆಕಾರ ಯಾವುದೇ ದೊಣ್ಣೆ ಕಾಣುತ್ತಿಲ್ಲ, ನೇರವಾಗಿರುವ ದೊಣ್ಣೆ ಕಾಣುತ್ತದೆ ಎಂದರೆ ಸರಿಯಲ್ಲ. ನಿಶಾನೆ ಪಿ–3 ರಿಂದ 6 ರಲ್ಲೂ ಕೂಡ ಮಹಜರನ್ನು ಯಾರು ಬರೆಯುತ್ತಿದ್ದಾರೆ ಎಂದು ಕಾಣುತ್ತಿಲ್ಲ ಎಂದರೆ ಸಾಕ್ಷಿಯು ಮಹಜರ್ ಮತ್ತು ಪೋಟೋದಲ್ಲಿ ನಮೂದಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿಶಾನೆ ಪಿ–2 ನ್ನು ದಿಃ– 30.07.2021 ರಂದು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮಹಜರನ್ನು ದಿಃ– 30.07.2021 ರಂದು ಜರುಗಿಸಿದ್ದರೆ ಮೃತೆಯ ಶವ ಇರುತ್ತಿತ್ತು ಮತ್ತು ಜನರು ಇರುತ್ತಿದ್ದರು, ಆದರೆ ಸದರಿ ಮಹಜರನ್ನು ಆ ದಿನ ಜರುಗಿಸಿರುವುದಿಲ್ಲ, ಹಾಗಾಗಿ ಯಾರು ಕೂಡ ಕಾಣುತ್ತಿಲ್ಲ ಎಂದರೆ ಸರಿಯಲ್ಲ.

27. ಆರೋಪಿ ಪ್ರಕರಣದ ಕಾಲದಲ್ಲಿ ಅಪಘಾತಕ್ಕೆ ಒಳಗಾಗಿ ಚಿಕಿತ್ಸೆಯಲ್ಲಿದ್ದ ಎಂಬುದು ತನಿಖಾ ಕಾಲದಲ್ಲಿ ಕಂಡು ಬಂದಿರುತ್ತದೆ ಎಂದರೆ ಸರಿ. ಆರೋಪಿಗೆ ತುಂಬಾ ಕುಡಿಯುವ ಅಬ್ಯಾಸ ಇತ್ತು ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

28. ಕಲಂ 65(ಬಿ) ಪ್ರಮಾಣ ಪತ್ರದಲ್ಲಿ ಪೋಟೋಗಳನ್ನು ತೆಗೆದವರು ಯಾರು ಮತ್ತು ಕ್ಯಾಮೆರಾ ಯಾರಿಗೆ ಸೇರಿದ್ದು ಎಂದು ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ನಮೂದಿಸಲಾಗಿದೆ ಎಂದು ನುಡಿಯುತ್ತಾರೆ. ಸದರಿ ಪ್ರಮಾಣ ಪತ್ರದಲ್ಲಿ ಕ್ಯಾಮೆರಾ ಯಾರಿಗೆ ಸೇರಿದ್ದು ಮತ್ತು ಯಾವ ಮಾಡೆಲ್-ದಾಗಿದೆ ಎಂಬುದರ ಬಗ್ಗೆ ವಿವರಗಳನ್ನು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪ್ರಮಾಣ ಪತ್ರದಲ್ಲಿ ಕ್ಯಾಮೆರಾವನ್ನು ನೇರವಾಗಿ ಕಂಪ್ಯೂಟರಿಗೆ ಅಳವಡಿಸಲಾಗಿರುತ್ತದೆಯೋ? ಅದು ಎಷ್ಟು ಜಿ.ಬಿಯಾದಾಗಿರುತ್ತದೆ ಮತ್ತು ಕಂಪ್ಯೂಟರಿನ ವಿವರಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪ್ರಮಾಣ ಪತ್ರವು ಕಾನೂನಾತ್ಮಕವಾಗಿ ಯಾವ ಅಂಶಗಳನ್ನು ಒಳಗೊಂಡಿರಬೇಕೋ ಆ ಅಂಶಗಳನ್ನು ಒಳಗೊಂಡಿರುವುದಿಲ್ಲ, ಹಾಗಾಗಿ ಕಾನೂನಿನ ಪ್ರಕಾರ ಊರ್ಜಿತವಾಗಿರುವುದಿಲ್ಲ ಎಂದರೆ ಸರಿಯಲ್ಲ.

29. ಆರೋಪಿಯಿಂದ ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ಎಷ್ಟು ದಿನಗಳ ನಂತರ ಆರ್.ಎಪ್.ಎಸ್.ಎಲ್ ಗೆ ಕಳುಹಿಸಲಾಗಿತ್ತು ಎಂದರೆ ಸಾಕ್ಷಿಯು ದಿಃ-12.08.2021 ರಂದು ಕಳುಹಿಸಿರುತ್ತೇನೆ ಎಂದು ನುಡಿಯುತ್ತಾರೆ. ಬಟ್ಟೆಗಳನ್ನು ದಿಃ-30.07.2021 ರಂದು ಅಮಾನತ್ತುಪಡಿಸಿಕೊಂಡಿದ್ದ, ದಿಃ-12.08.2021 ರಂದು ಆರ್.ಎಪ್.ಎಸ್.ಎಲ್‌ಗೆ ಕಳುಹಿಸಲಾಯಿತ್ತು ಎಂದು ಹೇಳಿದ್ದು, ಅಲ್ಲಿಯವರೆಗೆ ಸದರಿ ವಸ್ತುಗಳು ಯಾರ ಸುಪರ್ದಿಯಲ್ಲಿ ಇದ್ದವು ಎಂದರೆ ಸಾಕ್ಷಿಯು ನಮ್ಮ ಸುಪರ್ದಿಯಲ್ಲಿದ್ದವು ಎಂದು ನುಡಿಯುತ್ತಾರೆ. ಸದರಿ ವಸ್ತುಗಳನ್ನು ನಿಮ್ಮ ಸುಪರ್ದಿಯಲ್ಲಿ ಇಟ್ಟುಕೊಳ್ಳಲು ನ್ಯಾಯಾಲಯದ ಆದೇಶ ಪಡೆಯಲಾಗಿರುತ್ತದೆಯೇ? ಎಂದರೆ ಸಾಕ್ಷಿಯು ಪ್ರತ್ಯೇಕವಾಗಿ ಆದೇಶ ಪಡೆದಿರುವುದಿಲ್ಲ, ಆದರೆ ಪಿ.ಎಪ್ ನಲ್ಲಿ ನ್ಯಾಯಾಲಯದಿಂದ ಆದೇಶ

ಪಡೆಯಲಾಗಿತ್ತು ಎಂದು ನುಡಿಯುತ್ತಾರೆ. ಪ್ರಸ್ತುತ ಪ್ರಕರಣದಲ್ಲಿ ಮೃತೆಯ ಸಾವು ಆಕಸ್ಮಿಕವಾಗಿರುತ್ತದೆ ಎಂದು ತಿಳಿದಿದ್ದರೂ ಸಹ, ಪ್ರಕರಣವನ್ನು ಕೊಲೆ ಎಂದು ತೋರಿಸಲು ಸದರಿ ವಸ್ತುಗಳನ್ನು ಆರ್.ಎಫ್.ಎಸ್.ಎಲ್ ಗೆ ಕಳುಹಿಸಲಾಗಿರುತ್ತದೆ ಎಂದರೆ ಸರಿಯಲ್ಲ.

30. ವೈದ್ಯಾಧಿಕಾರಿ ಡಾ. ರೇವಣ್ಣರವರು ಸಹ ಬಿದ್ದಾಗ ಸಹ ಈ ರೀತಿ ಆಕಸ್ಮಿಕ ಸಾವು ಆಗಬಹುದು ಎಂದು ಅಭಿಪ್ರಾಯ ನೀಡಿದ್ದು ನನಗೆ ತಿಳಿದಿದ್ದರೂ ಸಹ, ಕೊಲೆಯ ಪ್ರಕರಣವನ್ನು ತೋರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಚಾ.ಸಾಃ2 ರವರು ತಮ್ಮ ಕಲಂ 164 ಸಿ.ಆರ್.ಸಿ.ಪಿ ಅಡಿಯ ಹೇಳಿಕೆಯಲ್ಲಿಯೂ ಸಹ ಸಾವು ಆಕಸ್ಮಿಕವಾಗಿದ್ದು, ಆರೋಪಿ ಮೃತೆಗೆ ಕೆನ್ನೆಗೆ ಹೊಡೆದಿದ್ದರು ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿಯು ದೊಣ್ಣೆಯಿಂದ ಹೊಡೆದಾಗ ಕೆಳಗೆ ಬಿದ್ದು ತಲೆಗೆ ಏಟಾಗಿರುತ್ತದೆ ಎಂದು ನುಡಿದಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ.

31. ಚಾ.ಸಾಃ5 ರಿಂದ 8 ಮತ್ತು 14 ರವರು ನನ್ನ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಚಾ.ಸಾಃ11 ಆರೋಪಿಯ ಹೆಂಡತಿ ಎಂದರೆ ಸರಿ. ತನಿಖಾ ಸಮಯದಲ್ಲಿ ಆರೋಪಿ ಮತ್ತು ಆತನ ಹೆಂಡತಿ ಪ್ರತ್ಯೇಕವಾಗಿ ವಾಸವಾಗಿರುತ್ತಾರೆ ಎಂದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಮೃತೆಯ ಸಾವು ಆಕಸ್ಮಿಕವಾಗಿರುವುದು ಗೊತ್ತಿದ್ದರೂ ಸಹ ಚಾ.ಸಾಃ1 ರವರ ಕೋರಿಕೆಯ ಮೇರೆಗೆ ಪ್ರಕರಣದಲ್ಲಿ ಕೊಲೆ ಎಂದು ಸುಳ್ಳು ದೋಷಾರೋಪಣಾ ಪಟ್ಟಿ ಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಕೊಲೆಗೆ ಬೇಕಾದ ಎಲ್ಲಾ ಸಾಕ್ಷ್ಯಗಳನ್ನು ಸುಳ್ಳಾಗಿ ಸಂಗ್ರಹಿಸಿ ಆರೋಪಿಯ ವಿರುದ್ಧ ಸುಳ್ಳು ಕೊಲೆ ಪ್ರಕರಣವನ್ನು ದಾಖಲಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಮೃತೆಯ ಸಾವಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮೈಸೂರು.